ರಂಗನಾಥ ರಾಮಚಂದ್ರ ರಾವು ತೆಲುಗು ಲೇಖಕ ಮತ್ತು ಅನುವಾದಕರು. ಕೇಂದ್ರ ಸಾಹಿತ್ಯ ಅಕಾಡೆಮಿಗಾಗಿ ಕನ್ನಡದಿಂದ ಬಂಡಾಯ, ಕಲ್ಲು ಕರಗುವ ಸಮಯ, ಅರಮನೆ, ಓಂ ಣಮೋ, ಹಳ್ಳ ಬಂತು ಹಳ್ಳ, ಅವಧೇಶ್ವರಿ, ಪೂರ್ಣ ಚಂದ್ರ ತೇಜಸ್ವಿ ಬದುಕು ಮತ್ತು ಬರಹ ಮುಂತಾದ ಕೃತಿಗಳನ್ನು ತೆಲುಗು ಭಾಷೆಗೆ ಅನುವಾದಿಸಿದ್ದಾರೆ. ಎರಡೂ ಭಾಷೆಗಳಲ್ಲಿ ಹಿಡಿತ ಸಾಧಿಸಿರುವ ಅವರಿಗೆ ಅನೇಕ ಪ್ರಶಸ್ತಿ, ಪುರಸ್ಕಾರಗಳು ಸಂದಿವೆ.

ಸಿಟ್ಟು, ಬೇಸರ, ಹತಾಶೆ, ಎಲ್ಲವೂ ಮಗಳಮೇಲೆ ತಿರುಗಿತು.

'ತಕ್ಷಣ ನಮಗೆ ಏಕೆ ಹೇಳಲಿಲ್ಲ?' ಮಗಳನ್ನು ಕುಳ್ಳಿರಿಸಿ ಅಲುಗಾಡಿಸುತ್ತಾ ಕೇಳಿದರು ಮಾಲತಿ. 'ಹೇಳಬೇಕೆಂದರೆ ಭಯವಾಯಿತು.'

'ನಾನೇ ಹ್ಯಾಂಡಲ್ ಮಾಡಬೇಕೆಂದುಕೊಂಡಿದ್ದೆ' ಶ್ರಿಯಾ ಕಣ್ಣುಗಳಲ್ಲಿ ಮತ್ತೆ ಹೆದರಿಕೆ.

'ಬಚ್ಚಿಡುವುದಕ್ಕೂ, ಹ್ಯಾಂಡಲ್ ಮಾಡುವುದಕ್ಕೂ ಇದು ಪರೀಕ್ಷೆ ಅಲ್ಲ' ಎನ್ನುತ್ತಾ ಮಾಲತಿ ತಲೆ ಬಡಿದುಕೊಂಡಳು.

'ಆಸ್ಪತ್ರೆಗೆ ಹೋಗಿರುವೆಯಾ?'

'ಹುಂ, ರೇಪ್ ಕಿಟ್ ಪರೀಕ್ಷೆ ಮಾಡಿದರು'

ತಾಯಿ ಅರ್ಥವಾಗದಂತೆ ನೋಡಿದಳು. 'ಹೀಗೆ ಜರುಗಿದಾಗ, ಕ್ರೈಸಿಸ್ ಸೆಂಟರ್ ಅಥವಾ ಯಾವುದೇ ಆಸ್ಪತ್ರೆಗೆ ಹೋದರೂ, ಈ ಪರೀಕ್ಷೆಯನ್ನು ಮಾಡುತ್ತಾರಂತೆ. ನನಗೂ ಗೊತ್ತಿರಲಿಲ್ಲ. ವಿಷಯ ಹೇಳಿದ ಕೂಡಲೇ ಮೈ ಮೇಲೆ ಎಲ್ಲೆಲ್ಲಿ ಗಾಯಗಳಾಗಿವೆಯೋ ಪರೀಕ್ಷೆ ಮಾಡಿದರು. ಮೆಟೀರಿಯಲ್ ಕಲೆಕ್ಷನ್‌ಗಾಗಿ ಬ್ಯಾಗ್ಸ್, ಶೀಟ್ಸ್, ಚೆಕ್ ಲಿಸ್ಟ್, ಬಾಚಣಿಗೆ, ಎನ್ವೋಲಪ್, ಇನ್‌ಸ್ಟ್ರಕ್ಷನ್ ಶೀಟ್ ಎಲ್ಲವೂ ಕಿಟ್‌ನಲ್ಲಿ ಇದ್ದವು. ಪ್ರತಿ ಸಣ್ಣ ಗಾಯವನ್ನು ಫೋಟೊ ತೆಗೆದು ಎಲ್ಲಾ ವಿವರಗಳನ್ನು ನೋಟ್ ಮಾಡಿಕೊಂಡರು. ಪ್ರೆಗ್ನೆನ್ಸಿ ಬಾರದಂತೆ ಮಾರ್ನಿಂಗ್ ಆಫ್ಟರ್ ಪಿಲ್ ಕೂಡಾ ಕೊಟ್ಟಿದ್ದಾರೆ' ಎಂದು ಇಡೀ ಘಟನೆಯನ್ನು ನೆನಪಿಸಿಕೊಳ್ಳುತ್ತಾ ತಾಯಿಗೆ ಹೇಳುವಾಗ ಶ್ರಿಯಾ ಮತ್ತೆ ನಡುಗಿಹೋದಳು. ಕಣ್ಣುಗಳಿಂದ ನಿಲ್ಲದಂತೆ ಕಣ್ಣೀರು. ಮಗಳ ಸ್ಥಿತಿಯನ್ನು ನೋಡುತ್ತಿದ್ದಂತೆ ಮಾಲತಿಯ ಹೃದಯ ಕ್ಷೋಭೆಗೊಳಗಾಯಿತು.

'ಬೇಡಬಿಡು, ಅವನ್ನೆಲ್ಲ ನೆನಪಿಸಿಕೊಳ್ಳಬೇಡ' ಅಳುತ್ತಿದ್ದ ಮಗಳನ್ನು ತಬ್ಬಿ ಹಿಡಿದುಕೊಂಡಳು ಮಾಲತಿ.

* * *

'ಇಂತಹ ಮತಿಗೇಡಿಗಳನ್ನು ಗಲ್ಲಿಗೇರಿಸಬೇಕು' ಸದಾ ಕೂಲ್ ಆಗಿಯೇ ಇರುತ್ತಿದ್ದ ಸಂದೀಪ್ ಅಷ್ಟು ಸಿಟ್ಟಾಗುವುದನ್ನು ನೋಡಿ ಮಾಲತಿ ಮತ್ತು ಪ್ರಸಾದ್ ಇಬ್ಬರಲ್ಲೂ ಗಾಬರಿ, ಆತಂಕ, ಸ್ಪಷ್ಟವಾಗಿ ಕಾಣಿಸಿಕೊಂಡಿತು.

'ಕಾಮ್ ಡೌನ್ ದೀಪೂ' ತಂದೆ ತಡೆಯುತ್ತಿದ್ದರೂ ಸರಿ, ಸಂದೀಪ್ ಮುಖ ಸಿಟ್ಟಿನಿಂದ ಕೆಂಪಾಯಿತು. ರೋಷದಿಂದ ಬಿರುಸಾಗಿ ಉಸಿರಾಡುತ್ತಿದ್ದ. ಮೂಗಿನ ಹೊಳ್ಳೆಗಳು ಅದುರುತ್ತಿದ್ದವು. ಶರೀರ ನಡುಗುತ್ತಿತ್ತು.

ಮಾಲತಿ ಏನೂ ಮಾತನಾಡಲಿಲ್ಲ. ಮಗನ ಆಗ್ರಹ ನೋಡಿ, ಹೇಳಿದ ಹಾಗೆಯೇ ಮಾಡುವನೇನೋ ಎಂಬ ಭಯದಿಂದ ಸ್ವಲ್ಪ ಸಿಟ್ಟಾಗಿ, ಮತ್ತಷ್ಟು ಬೇಜಾರಾಗಿ ಮಡದಿಯ ಕಡೆಗೆ ನೋಡಿದ ಪ್ರಸಾದ್, 'ನೀನು ಕೂಡಾ ಅವನಿಗೆ ತಿಳಿಸಿ ಹೇಳು' ಎನ್ನುವಂತೆ.

ಆದರೆ, ಮಾಲತಿ ಒಂದು ಮಾತನ್ನೂ ಹೇಳಲಿಲ್ಲ. 'ಇದರ ಬಗ್ಗೆ ಕನಿಷ್ಠ ಮನೆಯಲ್ಲಾದರೂ ಯಾರೋ ಒಬ್ಬರು ಗಟ್ಟಿಯಾಗಿ ಮಾತಾಡಲೇಬೇಕು' ಎಂದು ಭಾವಿಸಿದಳು. ಮಡದಿಯ ಮೌನ ನೋಡಿ ಪ್ರಸಾದನಿಗೆ ಮತ್ತಷ್ಟು ರೇಗಿತು.

'ಅಂದರೆ ಈ ಮನೆಯಲ್ಲಿ ನಾನೊಬ್ಬನೇ ಒಂದು ಪಾರ್ಟಿ, ಅಲ್ಲವೇ?' ಗಂಡ ಅನ್ನುತ್ತಿರುವ ಮಾತು ತನ್ನನ್ನು ಉದ್ದೇಶಿಸಿಯೇ ಎಂದು ಮಾಲತಿಗೆ ಗೊತ್ತು. ಸಂದೀಪ್ ಹೇಳಿದ ಮಾತನ್ನೇ ಬಹುತೇಕ ತಾನೂ ಸಹಾ ಹೇಳಿದಾಗ ನಯವಾಗಿಯೂ, ಹೆದರಿಸುವಂತೆಯೂ ಪ್ರಸಾದ್ ಮಾಡಿದ ಹಿತಬೋಧೆಯನ್ನು ಮಾಲತಿ ಇನ್ನೂ ಮರೆತಿರಲಿಲ್ಲ.

'ಫುಟ್‌ಬಾಲನ್ನು ಆಡಿದ ಮಾತ್ರಕ್ಕೇ ಅವರೇನು